ಮೇಲೆ ಹಣೆದರಾಯಿತು. ಎದುರಿಗೆ ಯಾರೋ ನಿಂತಿರುವ ಭಾಸವಾದರೂ, ಯಾರಾದರೂ ತನ್ನ ಬೆನ್ನು ಹತ್ತಿ ಬಂದಿರಬಹುದೆಂದು ಅನಿಸಲಿಲ್ಲ. ಕಳೆದ ವರ್ಷ ಕೆಲವರು ಈ ಉಪದ್ವ್ಯಾಪ ಮಾಡಿಯೂ ನೋಡಿದ್ದರು.

...ಎಂದಿನಂತೆ ಹಗಲಿನಲ್ಲಿ ತೋಡಿದ ಗೋರಿಯ ಹೊಂಡವನ್ನು ಅಡಗಿ ಕುಳಿತು ನೋಡಿ ರಾತ್ರಿ ಅವನು ಮಸಣಕ್ಕೆ ಬಂದ. ಸರಸರ ಗೋರಿಯನ್ನು ಅಗೆದ. ಬಳಿಕ ಅಲ್ಲಿ ಇರಿಸಿದ ಕಟ್ಟಿಗೆಯ ಕೊರಡನ್ನು ಮೇಲೆ ಚೆಲ್ಲಿದ. ಹೆಣದ ಬಟ್ಟೆಯನ್ನು ಸರ್ರನೆ ಎಳೆದ. ಅಷ್ಟರಲ್ಲಿ ಅವನಿಗೆ ಸದ್ದು ಕೇಳಿಸಿತು. ಎಂಟು–ಹತ್ತು ಜನರು ಕೋಲು–ಬಡಿಗೆ ಮತ್ತು ಕಂದೀಲು ಹಿಡಿದು ಕೊಂಡು ಸ್ಮಶಾನಕ್ಕೆ ಬಂದರು. ಅವರು ತೀರ ಸಮೀಪ ಬರುವವರೆಗೂ ರಸೂಲ್‌ನಿಗೆ ಗೊತ್ತಾಗಲಿಲ್ಲ. ಹೀಗಾಗಿ ಅಲ್ಲಿಂದ ಅವನಿಗೆ ಪಲಾಯನ ಮಾಡಲು ಅವಕಾಶವೇ ಸಿಗಲಿಲ್ಲ. ಆದರೂ ಅವನು ಹೆದರಲಿಲ್ಲ. ಗೋರಿಯ ಹೊಂಡದಲ್ಲೇ ಅವನು ಕೆಲಕ್ಷಣ ಅಡಗಿ ಕುಳಿತ. ತಣ್ಣಗಿನ ಹೆಣದ ಮೇಲೆ ಅವನು ನಿಂತಿದ್ದ. ಆ ಜನರು ಸನಿಹ ಬಂದು ಗೋರಿಯೊಳಗೆ ಇಣುಕಿ ನೋಡಲಾರಂಭಿಸಿದರು. ರಸೂಲನು ಹೆಣದ ಬಟ್ಟೆಯನ್ನು ತಲೆಯಿಂದ ಪಾದದ ವರೆಗೂ ಹೊದೆದಿದ್ದ. ಅವನು ಠಣ್ಣನೆ ಕುಪ್ಪಳಿಸಿ ಹೊರಬಂದ. ಹೆಣದ ಬಟ್ಟೆಯಲ್ಲಿ ಸುತ್ತಿದ ಆ ಆಕೃತಿಯನ್ನು ಕಂಡಾಗ ಎಲ್ಲರ ಮಾತೇ ಹೂತು ಹೋಯಿತು. ಅವರಿಗೆ ಬೆವರು



ಬಂದು, ತಲೆ ಸುತ್ತಿದಂತಾಯಿತು. ಅವರು ಲಬೋ ಲಬೋ ಎಂದು ಹೊಯ್ಕೊಳ್ಳುತ್ತ ಊರಿನತ್ತ ಓಡಲಾರಂಭಿಸಿದರು. ಅನಂತರ ರಸೂಲನು ಗೋರಿಗೆ ಮಣ್ಣು ಎಳೆದು ಹಾಕಿದ. ಬಳಿಕ ಹೊರಟು ಹೋದ. ಮರುದಿನ ಊರಲ್ಲಿ ಕೋಲಾಹಲವೇ ಎದ್ದಿತು. ಊರಿನ ಒಂದು ಮೂಲೆಯಲ್ಲಿರುವ ಮಸಣಕ್ಕೆ ಹೋಗಿ ಸತ್ಯ–ಸುಳ್ಳನ್ನು ಒರೆಗಲ್ಲಿಗೆ ಹಚ್ಚುವ ಪ್ರಯತ್ನವನ್ನೂ ಯಾರೂ ಮಾಡಲಿಲ್ಲ. ಅವರಲ್ಲಿ ಒಬ್ಬನಿಗೆ ಜ್ವರ ಬಂದು, ವಾರದೊಳಗೆ ಅವನು ಗೊಟಕ್ ಅಂದ!

ಎದುರಿನ ಆಕೃತಿಯು ಬದಿಗೆ ಸರಿದಿದ್ದು ಕಂಡು ರಸೂಲ ಎಚ್ಚೆತ್ತುಕೊಂಡ. ಅವನು ಕಂಗಳನ್ನು ಅರಳಿಸಿ ನೋಡುವ ಪ್ರಯತ್ನ ಮಾಡಿದ. ಹುಲ್ಲು ಗಸ್‌ಗಸ್ ಸದ್ದು ಮಾಡಿತು. ಕಾಲೆಳೆದುಕೊಂಡು